ಉಪಾಧ್ಯಕ್ಷರು :– ಡಾ: ಕೆ. ಅನ್ನದಾನಿ ಅವರು

(ಮಾನ್ಯ ಸದಸ್ಯರ ಗೈರು ಹಾಜರಿ)

ಕೆ. ಎನ್. ಕಿರಣ್ ಕುಮಾರ್

(ಮಾನ್ಯ ಸದಸ್ಯರ ಗೈರು ಹಾಜರಿ)

ಬಾಗೇಪಲ್ಲಿಯಲ್ಲಿ ಪರಿಶಿಷ್ಟ ಜನಾಂಗದ ವಿದ್ಯಾರ್ಥಿ ನಿಲಯ

521 (6097) : **ಶ್ರೀ ಶ್ರೀರಾಮರೆಡ್ಡಿ ಜಿ. ವಿ. (ಬಾಗೇಪಲ್ಲಿ) :** ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಾಗೇಪಲ್ಲಿ ಪಟ್ಟಣದಲ್ಲಿ ಪರಿಶಿಷ್ಟ ಜನಾಂಗದ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಹಾಸ್ಟೆಲ್ ಸೌಲಭ್ಯವಿಲ್ಲದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಾಗೇಪಲ್ಲಿಯಲ್ಲಿ ಪರಿಶಿಷ್ಟ ಜನಾಂಗದ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಂಡಿದೆ?

ಡಾ: ವೈ. ನಾಗಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು) :

ಅ) ಹೌದು,

ಆ) ಬಾಗೇಪಲ್ಲಿಯಲ್ಲಿ ಪರಿಶಿಷ್ಟ ವರ್ಗದ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ಮಂಜೂರಾತಿ ಕುರಿತು ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ. 2004–05ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯವನ್ನು ಮಂಜೂರು ಮಾಡುವ ಪ್ರಸ್ತಾವನೆ ಪರಿಗಣಿಸಲಾಗಿದ್ದು. ಅನುದಾನದ ಕೊರತೆಯಿಂದಾಗಿ ಮಂಜೂರು ಮಾಡಿರುವುದಿಲ್ಲ.

ಇ) 2005–06ನೇ ಸಾಲಿನಲ್ಲಿ ಈ ಪ್ರಸ್ತಾವನೆಗಳನ್ನು ಪರಿಗಣಿಸಲಾಗುವುದು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :– ಮಾನ್ಯ ಉಪಾಧ್ಯಕ್ಷರೇ, ಉತ್ತರಗಳನ್ನು ಕೊಟ್ಟಿದ್ದಾರೆ. 2004–05ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯವನ್ನು ಮಂಜೂರು ಮಾಡುವ ಪ್ರಸ್ತಾವನೆ ಪರಿಗಣಿಸಲಾಗಿದ್ದು, ಅನುದಾನದ ಕೊರತೆಯಿಂದಾಗಿ ಮಂಜೂರು ಮಾಡಿರುವುದಿಲ್ಲ ಎಂದು ಹೇಳಿದ್ದಾರೆ. ಈ ತರಹ ತಾವು ಉತ್ತರ ಕೊಟ್ಟಿದ್ದೀರಿ. ನಾನು ಕೇಳಿರುವುದು ನಿರ್ದಿಷ್ಟವಾಗಿ ಅಲ್ಲಿ ಎಸ್‌ಟಿ ಜನಾಂಗದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿಗೆ ಇದೆ. ಅವರಿಗೆ ಪ್ರತ್ಯೇಕವಾದಂತಹ ಹಾಸ್ಟೆಲ್ ಬೇಕು ಎಂದು ಹೇಳಿ ಅಲ್ಲಿಂದ ಎರಡು ವರ್ಷದಿಂದ ಪ್ರಸ್ತಾವನೆಯನ್ನು ಕಳುಹಿಸುತ್ತಿದ್ದೇವೆ. ಇನ್ನೊಂದು ಕಡೆ ಆಡಿಟ್ ರಿಪೋರ್ಟ್‌ಗಳೆಲ್ಲಾ ಬರುತ್ತದೆ. ಕೋಟ್ಯಾಂತರ ರೂಪಾಯಿ ಎಸ್‌ಸಿ:ಎಸ್‌ಟಿ ಕಾರ್ಪೊರೇಷನ್‌ನಲ್ಲಿ ಹಣ ಖರ್ಚಾಗಿದೆ, ವಾಪಸ್ ಹೋಗುತ್ತಿದೆ. ಸರಿಯಾಗಿ ಉಪಯೋಗಕ್ಕೆ ಬರುತ್ತಿಲ್ಲ ಎಂದು, ನೀವು ಹಣ ಇಲ್ಲ, ಅದಕ್ಕೋಸ್ಕರ ಈ ವರ್ಷ ಮಂಜೂರು

ಮಾಡುವುದಿಲ್ಲ, ಮುಂದಿನ ವರ್ಷ ನೋಡುತ್ತೇವೆಂದು ಹೇ ಳುತ್ತೀರಿ. ಯಾವುದು ಸರಿ ಎಂದು. ಸಿಎಜಿ ರಿಪೋರ್ಟ್ ಕರೆಕ್ಟಾ? ಸರ್ಕಾರದ ಹೇಳಿಕೆ ಕರೆಕ್ಟಾ? ಯಾವುದು ಸರಿ? ಆದ್ದರಿಂದ ಇದು ಹಣಕಾಸಿನ ಕೊರತೆ ಅಲ್ಲ. ನಿಮ್ಮ ಇಚ್ಛಾಶಕ್ತಿಯ ಕೊರತೆ. ನೀವು ಬರೇ ಭಾಷಣ ಮಾಡಿದರೆ ಪ್ರಯೋಜನ ಆಗುವುದಿಲ್ಲ. ದಯವಿಟ್ಟು ಕಾರ್ಯಕ್ರಮದಲ್ಲಿ ತೋರಿಸಿ.

ಡಾ: ವೈ. ನಾಗಪ್ಪ :– ಸನ್ಮಾನ್ಯ ಅಧ್ಯಕ್ಷರೆ, ಆ ಒಂದು ಪ್ರಸ್ತಾವನೆಯನ್ನು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಬೇಕೆಂಬ 2004–05ನೇ ಸಾಲಿನಲ್ಲಿ ಕೋರಿಕೆ ಬಂದ ಹಿನ್ನೆಲೆಯಲ್ಲಿ ನಾವು ಒಂದು ಪತ್ರವನ್ನು 24.08.2004ರಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ. ಸರ್ಕಾರದಿಂದ ಇನ್ನೂ ಏನೂ ಉತ್ತರ ಖಂಡಿತ ಬಂದಿಲ್ಲ. ಬಂದ ತಕ್ಷಣ ಅದರ ಬಗ್ಗೆ ಗಮನ ಹರಿಸುತ್ತೇವೆ.

ಸಾರ್, ಸರ್ಕಾರ ಅಂದರೆ ಯಾರು? ಸರ್ಕಾರ ಅಂದರೆ ಯಾವುದು?

ಶ್ರೀ ಜೆ. ಸಿ. ಮಾಧುಸ್ವಾಮಿ : ನೀವು ಯಾರ ಪರವಾಗಿ ಉತ್ತರ ಹೇಳುತ್ತಿದ್ದೀರಿ? ಏನು ಸಾರ್ ಇದೆಲ್ಲಾ?

ಶ್ರೀ ಆರಗ ಜ್ಞಾನೇಂದ್ರ : ನನಗರ್ಥವಾಗುವುದಿಲ್ಲ 2–3 ಸಚಿವರು ಆ ರೀತಿ ಹೇಳಿದ್ದಾರೆ. ಸರ್ಕಾರಕ್ಕೆ ಫೈಲ್ ಕಳುಹಿಸಿದ್ದೇವೆ ಅಂತ.

ಶ್ರೀ ಜೆ. ಸಿ. ಮಾಧುಸ್ವಾಮಿ : ಸರ್ಕಾರ ಅಂದರೆ ಯಾರು? ಸರ್ಕಾರಕ್ಕೆ ಬರೆದಿದ್ದೇವೆಂದು ಹೇಳಿಬಿಟ್ಟರಲ್ಲಾ. ಸರ್ಕಾರಕ್ಕೆ ಬರೆದಿದ್ದೇವೆಂದು ನೀವೇ ಹೇಳಿದ್ದು. ಯಾರಿಗೆ ನೀವು ಈ ರೀತಿ ಉತ್ತರ ಕೊಡುತ್ತಿದ್ದೀರಿ?

(ಗೊಂದಲ)

ಶ್ರೀ ಜೆ. ಸಿ. ಮಾಧುಸ್ವಾಮಿ : ಇದು ಸೀರಿಯಸ್ ಮ್ಯಾಟರ್ ಸರ್. ಅವರೇ ಸರ್ಕಾರ ಅಂತ ನಾವು ಕುಳಿತಿದ್ದೇವೆ.

ಶ್ರೀ ಆರಗ ಜ್ಞಾನೇಂದ್ರ : ಇದು ರೆಕಾರ್ಡ್ ಆಗುತ್ತಿದೆ.

ಉಪಾಧ್ಯಕ್ಷರು : ಅದನ್ನು ರೆಕಾರ್ಡ್‌ನಿಂದ ತೆಗೆಸಿ.

ಶ್ರೀ ಆರಗ ಜ್ಞಾನೇಂದ್ರ : ಈಗ ಸರ್ಕಾರ ಅಂದರೆ ಯಾರು ಎಂದು ನಮಗೆ ಕ್ಲಾರಿಫಿಕೇಶನ್ ಕೊಡಲಿ.

ಶ್ರೀ ವಾಟಾಳ್ ನಾಗರಾಜ್ : ಈಗ ನಾಗಪ್ಪನವರೆ, ತೊಂದರೆ ಇಲ್ಲ, ಇರಲಿ. ನೀವು ಬರೆದಿರಬಹುದು ನಮ್ಮದೇನೂ ಇಲ್ಲ. ಸರ್ಕಾರಕ್ಕೆ ಬರೆದಿದ್ದೇವೆಂದು ಅವರು ಹೇಳಿರುವುದರ ಬಗ್ಗೆ ನನ್ನದೇನೂ ಆಕ್ಷೇಪಣೆ ಇಲ್ಲ. ಆದರೆ, ಯಾವ ಸರ್ಕಾರಕ್ಕೆ ಬರೆದಿದ್ದೀರಿ? ಅಷ್ಟೇ ಹೇಳಿ ಸಾಕು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಉಪಾಧ್ಯಕ್ಷರೆ, ಇವರು ಕ್ಯಾಬಿನೆಟ್ ದರ್ಜೆಯ ಮಂತ್ರಿ. ನಾನು ಸರ್ಕಾರಕ್ಕೆ ಬರೆದಿದ್ದೇನೆಂದರೆ, ತಮಿಳುನಾಡು ಸರ್ಕಾರಕ್ಕೆ ಬರೆದಿರಾ? ಕೇಂದ್ರ ಸರ್ಕಾರಕ್ಕೆ ಬರೆದಿರಾ? ಕೇರಳ ಸರ್ಕಾರಕ್ಕೆ ಬರೆದಿರಾ? ಆಂಧ್ರಪ್ರದೇಶ ಸರ್ಕಾರಕ್ಕೆ ಬರೆದಿರಾ? ಯಾರ ಸರ್ಕಾರಕ್ಕೆ ಬರೆದಿದ್ದೀರಿ? ಹಾಗಾದರೆ, ಇವರದ್ದು ಬೇರೆ ಸರ್ಕಾರ ಇದೆಯೇ?

ಉಪಾಧ್ಯಕ್ಷರು : ಆಯಿತು, ಈಗ ನಿಮಗೆ ಉತ್ತರ ಬೇಕಲ್ಲಾ ಅವರು ಹೇಳುತ್ತಾರೆ ಕೇಳಿ.

ಡಾ: ವೈ. ನಾಗಪ್ಪ : ಸನ್ಮಾನ್ಯ ಉಪಾಧ್ಯಕ್ಷರೆ, 'ಸರ್ಕಾರ' ಅಂದರೆ ನಾನು ತಿಳಿದುಕೊಂಡಿರುವುದೇನೆಂದರೆ, Chief Minister and all...

ಶ್ರೀ ವಾಟಾಳ್ ನಾಗರಾಜ್ : ಇದು ಅತ್ಯಂತ ಅಪಾಯಕಾರಿ ಬೆಳವಣಿಗೆ. ನೀವು ಬಹಳ ಕೆಟ್ಟ ಸಂಪ್ರದಾಯ ಹಾಕುತ್ತಿದ್ದೀರಿ. ನೀವು ಯಾರು?

(ಗೊಂದಲ)

ಶ್ರೀ ಅಲ್ಕೋಡ್ ಹನುಮಂತಪ್ಪ : ಕ್ಯಾಬಿನೆಟ್ ಮುಂದೆ ಈ ವಿಷಯ ತಂದು ಪ್ರಸ್ತಾಪ ಮಾಡಿ.....

(ಗೊಂದಲ)

ಉಪಾಧ್ಯಕ್ಷರು : ಈಗ ಅವರ ದೃಷ್ಟಿಯಲ್ಲಿ ಸರ್ಕಾರ ಅಂದರೆ ಕ್ಯಾಬಿನೆಟ್. ಕ್ಯಾಬಿನೆಟ್ ಮುಂದೆ ತರತಕ್ಕಂಥ ವಿಷಯ ಅದು ಎಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಜೆ. ಸಿ. ಮಾಧುಸ್ವಾಮಿ : ಸರ್ಕಾರಕ್ಕೆ ಬರೆದಿದ್ದೇನೆ ಎಂದರೆ ಏನರ್ಥ?

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : 'ಸರ್ಕಾರ' ಅಂದರೆ ಮತ್ತೆ ಮುಖ್ಯಮಂತ್ರಿ ಎಂದು ಹೇಳುತ್ತಿದ್ದಾರಲ್ಲಾ, ಇದು ಹೇಗೆ? ಇವರು ಇನ್ನೊಂದು ಸಮಸ್ಯೆ ಹುಟ್ಟುಹಾಕುತ್ತಿದ್ದಾರಲ್ಲಾ.

ಶ್ರೀ ಆರಗ ಜ್ಞಾನೇಂದ್ರ : ಇಲ್ಲಿ ಎರಡು ಸರ್ಕಾರಗಳಿವೆ. ಒಂದು ಜೆಡಿ(ಎಸ್) ಸರ್ಕಾರ, ಮತ್ತೊಂದು ಕಾಂಗ್ರೆಸ್ ಸರ್ಕಾರ. ಅವರು ಪತ್ರವನ್ನು ಯಾವ ಸರ್ಕಾರಕ್ಕೆ ಬರೆದಿದ್ದಾರೆಂಬುದನ್ನು ಹೇಳಲಿ. ಏಕೆಂದರೆ, ಇದು ಸಮ್ಮಿಶ್ರ ಸರ್ಕಾರವೆಂದು ನಾವು ಹೇಳುತ್ತಿದೇವೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ದಯವಿಟ್ಟು ಸರ್ಕಾರನ್ನು ಕರೆಸಿ ಉತ್ತರ ಕೊಡಿ.

ಶ್ರೀ ವಾಟಾಳ್ ನಾಗರಾಜ್ : ನಮಗೆ ಬೇಕಾಗಿರುವುದು ಭೂತ–ಪ್ರೇತಗಳಲ್ಲ. ಸರ್ಕಾರ ಉತ್ತರ ಕೊಡಬೇಕು.

ಉಪಾಧ್ಯಕ್ಷರು : ಸರ್ಕಾರ ಅಂದರೆ ಕ್ಯಾಬಿನೆಟ್ ಎಂದು ಅವರು ಹೇಳಿರುವ ವಿಷಯ.

ಶ್ರೀ ವಾಟಾಳ್ ನಾಗರಾಜ್ : ಅವರು ಏನು ತಿಳಿದುಕೊಂಡಿದ್ದಾರೆ, ಸರ್ಕಾರ ಅಲ್ಲ ಅಂತ. ನಾವೇನು ತಿಳಿದುಕೊಳ್ಳಬೇಕು? ಭೂತ–ಪ್ರೇತಗಳಿವೆ, ಸರ್ಕಾರ ಎಲ್ಲೋ ಇದೆಯೆಂದು. ಸರ್ಕಾರ ಎಲ್ಲಿ?

ಶ್ರೀ ಆಲಂಗೂರು ಶ್ರೀನಿವಾಸ್ : ಈ ವಿಷಯವನ್ನು ಕ್ಯಾಬಿನೆಟ್ ಮುಂದೆ ತರುವ ವ್ಯವಸ್ಥೆ ಮಾಡುತ್ತೇನೆಂದು ಹೇಳಿದ್ದಾರೆ.

ಉಪಾಧ್ಯಕ್ಷರು : ಸರ್ಕಾರ ಅಂದರೆ ಕ್ಯಾಬಿನೆಟ್ ಎಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಅದು ಆಗುವುದಿಲ್ಲ. ಅದು ಹೋಯಿತು.

(ಗೊಂದಲ)

ಉಪಾಧ್ಯಕ್ಷರು : ಆಯಿತು, ಅವರು ಉತ್ತರ ಕೊಡುತ್ತಾರೆ. ತಾವು ಸಹಕಾರ ಕೊಡಬೇಕು. ಅವರೇ ಸರ್ಕಾರ. ನಾಗಪ್ಪನವರೆ, ಈಗ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರ ಎಂದರೆ ಅವರೇ. ಅವರೇ ಇಲ್ಲವೆಂದು ಹೇಳಿದ ಮೇಲೆ ನಾವು ಏನು ಮಾಡುವುದು? ಸದನದಲ್ಲಿ ಅವರ ಬಗ್ಗೆ ನನಗೆ ಬಹಳ ಗೌರವವಿದೆ. ಅವರು ಹೇಳಿದ ಪ್ರಕಾರ ಅವರು ಈ ಸದನದಲ್ಲಿ ಉಳಿಯುವುದಕ್ಕಾಗುವುದಿಲ್ಲ. ಶಾಸಕರಾಗಿ ಉಳಿಯಬಹುದು, ಮಂತ್ರಿಗಳಾಗಿ ಉಳಿಯುವುದಕ್ಕಾಗುವುದಿಲ್ಲ.

ಉಪಾಧ್ಯಕ್ಷರು : ಅದನ್ನು ನೋಡೋಣ.

ಶ್ರೀ ಜೆ. ಎ. ಶ್ರೀರಾಮರೆಡ್ಡಿ : ನೋಡೋಣ ಅಲ್ಲ.

ಶ್ರೀ ಅರಗ ಜ್ಞಾನೇಂದ್ರ :– ಅವರೇ ಸರ್ಕಾರ ಅಲ್ಲವೆಂದು ಒಪ್ಪಿಕೊಳ್ಳವುದಕ್ಕೆ ತಯಾರಾಗಿಲ್ಲದಿದ್ದಾಗ...

ಉಪಾಧ್ಯಕ್ಷರು : ಸರ್ಕಾರ ಎಂದರೆ ಕ್ಯಾಬಿನೆಟ್ ಎಂದು ತಿಳಿದುಕೊಂಡಿದ್ದಾರೆ. ಕ್ಯಾಬಿನೆಟ್ ಮುಂದೆ ತರತಕ್ಕಂಥ ವಿಷಯ ಅದಾಗಿದೆ. ಆ ಅರ್ಥದಲ್ಲಿ ಅವರು ಹೇಳಿದ್ದಾರೆ. ಸ್ವಲ್ಪ ಅಪಾರ್ಥವಾಗಿದೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಸದನದಲ್ಲಿ ನಿಂತುಕೊಂಡು 'ಸರ್ಕಾರಕ್ಕೆ ಬರೆದಿದ್ದೇನೆ' ಎಂದರೆ ಏನರ್ಥ?

ಉಪಾಧ್ಯಕ್ಷರು : ದಯವಿಟ್ಟು ಸ್ವಲ್ಪ ಸಹಕಾರ ಕೊಡಿ. ಅವರು ಏನು ಹೇಳುತ್ತಾರೋ ಕೇಳಿ.

ಶ್ರೀ ಸಿ. ಟಿ. ರವಿ : ಉಪಾಧ್ಯಕ್ಷರೆ, ಹೊಸದಾಗಿ ಶಾಸಕರಾದದವರಿಗೆ ಒಂದು ತರಬೇತಿ ಕೊಟ್ಟಿರಿ. ಹಾಗೆಯೇ, ಈ ಗೊಂದಲಗಳೆಲ್ಲವೂ ಇರಬಾರದೆಂದರೆ, ಮಂತ್ರಿಗಳಿಗೆ ಒಂದು ತರಬೇತಿ ಕೊಟ್ಟರೆ, ಸರ್ಕಾರ ಯಾವುದು, ಇವರು ಯಾರೆಂದು ಎಲ್ಲಾ ಗೊತ್ತಾಗುತ್ತದೆ.

ಡಾ: ವೈ. ನಾಗಪ್ಪ : ಸನ್ಮಾನ್ಯ ಸಭಾಪತಿಗಳೆ, ...

ಶ್ರೀ ವಾಟಾಳ್ ನಾಗರಾಜ್ : ಸಭಾಪತಿಯವರು ಇರುವುದು ವಿಧಾನ ಪರಿಷತ್ತಿನಲ್ಲಿ.

ಡಾ: ವೈ. ನಾಗಪ್ಪ : ಆಯಿತು. ಮಾನ್ಯ ಸಭಾಧ್ಯಕ್ಷರೆ, ಈ ಒಂದು ಪ್ರಸ್ತಾವನೆಯನ್ನು ನಾವು ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿಕೊಟ್ಟಿದ್ದೇವೆ. ಅದನ್ನು ಸರ್ಕಾರ ಎಂದರೆ ಫೈನಾನ್ಸ್ ಮಿನಿಸ್ಟರ್ ಹತ್ತಿರ ನಾವು ಮಾತನಾಡಿ...

ಉಪಾಧ್ಯಕ್ಷರು : ಮತ್ತೆ ಆ ಸಬ್ಜೆಕ್ಟ್ ಬೇಡ. ಸರ್ಕಾರ ಎನ್ನುವ ಪ್ರಶ್ನೆ ಬೇಡ.

ಡಾ: ವೈ. ನಾಗಪ್ಪ : ಆಯಿತು. I am the Government. I am the whole and sole.

ಶ್ರೀ ಅರಗ ಜ್ಞಾನೇಂದ್ರ : ನೀವೇ Whole and sole ಎನ್ನುವುದಾದರೆ, ಫೈಲನ್ನು ಸರ್ಕಾರಕ್ಕೆ ಏಕೆ ಕಳುಹಿಸಿದಿರಿ?

DR. Y. NAGAPPA : I mean, I am the whole and sole for my department and I am the Government.

ಶ್ರೀ ಜೆ. ಎ. ಶ್ರೀರಾಮರೆಡ್ಡಿ : ಇವರು I am the whole and sole ಎನ್ನುವುದು ಸರ್ಕಾರಕ್ಕಾ ಅಥವಾ ಡಿಪಾರ್ಟ್‌ಮೆಂಟ್‌ಗಾ?

ಡಾ: ವೈ. ನಾಗಪ್ಪ : ರೆಡ್ಡಿಯವರೆ, ತಾವು ಹಿರಿಯ ಸದಸ್ಯರಾಗಿದ್ದೀರಿ. ಇದರ ಬಗ್ಗೆ ನಾನು ಈಗಾಗಲೇ ಕ್ಲಾರಿಫಿಕೇಶನ್ ಕೊಟ್ಟಿದ್ದೇನೆ. ಯಾಕೆ ಆ ರೀತಿ ಮಾಡುತ್ತಿದ್ದೀರಿ? ನಾವು ಆರ್ಥಿಕ ಇಲಾಖೆಗೆ ಕಳುಹಿಸಿಕೊಟ್ಟಿದ್ದೇವೆ. ಅಲ್ಲಿಂದ ಕಾಗದ ಪತ್ರ ವಾಪಸ್ಸು ಬಂದಿದೆ. ಮುಂದಿನ ಅನುದಾನ ನೋಡಿಕೊಂಡು ನಾವು ನಿಮಗೆ ಮಂಜೂರು ಮಾಡುತ್ತೇವೆ. ಹಾಸ್ಟೆಲ್‌ಗಳನ್ನು ಕೊಡಿ ಎಂದು ಹೇಳಿದ್ದಾರೆ. ಅದಕ್ಕೋಸ್ಕರ, ಖಂಡಿತವಾಗಿಯು ಮಂಜೂರಾದ ಮೇಲೆ ಹೆಚ್ಚಿಗೆ ಹಾಸ್ಟೆಲ್ ತೆರೆದೇ ತೆರೆಯುತ್ತೇವೆ.

ಶ್ರೀ ಜೆ. ಎ. ಶ್ರೀರಾಮರೆಡ್ಡಿ : ಮಂಜೂರು ಮಾಡುವುದು ನೀವೇ ತಾನೇ?

ಡಾ: ವೈ. ನಾಗಪ್ಪ : ನಾವು ಮಂಜೂರು ಮಾಡಿಕೊಳ್ಳುತ್ತೇವೆ. ನಾವು ಮಂಜೂರು ಮಾಡಿಕೊಂಡ ಬಳಿಕ ಅದು ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಹೋಗುತ್ತದೆ. I have recommended to the Finance Department.

ಉಪಾಧ್ಯಕ್ಷರು :– ಶ್ರೀ ಮಲ್ಲಿಕಾರ್ಜುನ ಸಿದ್ದರಾಮಪ್ಪ ಖೂಬಾ – ಗೈರು ಹಾಜರಾಗಿದ್ದರು.